## ಹೆಮ್ಮೆಯ ವಿಷಯ

‘ಚಂದನ ಚಿರತೆ; ಹೊಸ ವರ್ಷಕ್ಕೊಂದು ವಿಸ್ಮಯ’ (ಜ. 29, ಸಂಜಯ್ ಗುಬ್ಬಿ) ಮುಖಪುಟ ಲೇಖನ ಓದಿ ಮೈ ಪುಳಕಗೊಂಡಿತು. ಶ್ರೀಗಂಧ ಬಣ್ಣದ ತುಪ್ಪಳದ ಮೇಲೆ ತಿಳಿ ಕಂದು ಬಣ್ಣದ ಪಕಳೆಗಳನ್ನು ಹೊಂದಿರುವ ‘ಚೆಂದುಳ್ಳಿ ಚೆಲುವೆ’ ಚಿರತೆ, ವಿಜಯನಗರ ಜಿಲ್ಲೆಯ ಕಾಡಿನಲ್ಲಿರುವುದು ನಮ್ಮ ಹೆಮ್ಮೆ.

—ಬಿದರಹಳ್ಳಿ ಚನ್ನವೀರಪ್ಪ ಹಿರೇಹಡಗಲಿ




## ಅಪರೂಪದ ಸಂಗತಿ

ನಮ್ಮ ದಾವಣಗೆರೆ ಜಿಲ್ಲೆಯಲ್ಲಿ ಹೆಚ್ಚಾಗಿ ಚನ್ನಗಿರಿ, ಹೊನ್ನಾಳಿ ಮತ್ತು ಜಗಳೂರು ಸುತ್ತಮುತ್ತ ಆಗಾಗ ಚಿರತೆ ದಾಳಿ ಬಗ್ಗೆ ಓದುತ್ತಿರುತ್ತೇವೆ. ಆದರೆ ಈ ಅಪರೂಪದ ‘ಚಂದನ ಚಿರತೆ’ ಬಗ್ಗೆ ಗೊತ್ತಿರಲಿಲ್ಲ. ವಿಜಯನಗರ ಜಿಲ್ಲೆಯ ಸುತ್ತಮುತ್ತ ಕಂಡ ಚಂದನ ಚಿರತೆಯ ಬಗ್ಗೆ ಹೆಚ್ಚಿನ ವಿವರ ನೀಡಿದ ಲೇಖಕರಿಗೆ ಧನ್ಯವಾದ.

—ಲಕ್ಷ್ಮಣ ರಾವ್ ಎಂ.ಎಲ್., ದಾವಣಗೆರೆ

## ‘ಕ್ಯಾನ್ಸರ್’ ಲೇಖನದಲ್ಲಿ ಗೊಂದಲ

‘ಕ್ಯಾನ್ಸರ್ ಮರುಕಳಿಕೆ; ತಪ್ಪಿಸಬಹುದು ಕುಣಿಕೆ’ (ಜ. 29, ಉಮಾ ಅನಂತ್) ಆರೋಗ್ಯ ಲೇಖನದ ಕೆಲವು ವಾಕ್ಯಗಳಲ್ಲಿ ಗೊಂದಲವಿದೆ. ಪ್ರಾಥಮಿಕ ಸ್ತನ ಕ್ಯಾನ್ಸರ್ ಮತ್ತು ಪುನರಾವರ್ತಿತ ಸ್ತನ ಕ್ಯಾನ್ಸರ್‌ಗಳ ಚಿಕಿತ್ಸಾ ವಿಧಾನಗಳು ಹಾಗೂ ನಿರೀಕ್ಷಿತ ಫಲಿತಾಂಶಗಳು ಒಂದೇ ಆಗಿರುವುದಿಲ್ಲ.

ಲೇಖನದಲ್ಲಿ HER2 ಧನಾತ್ಮಕ ಸ್ತನ ಕ್ಯಾನ್ಸರ್‌ಗೆ ನೀಡುವ ಚಿಕಿತ್ಸೆ ಗುಣಪಡಿಸುತ್ತದೆ ಎಂಬ ಸೂಚನೆ ಇದೆ. ಆದರೆ ಇದನ್ನು ಖಚಿತವಾಗಿ ಹೇಳುವುದು ಕಷ್ಟ. ಇಂದಿನ ಚಿಕಿತ್ಸೆಗಳು ಕ್ಯಾನ್ಸರ್ ಮರುಕಳಿಸುವ ಅಪಾಯವನ್ನು ಕಡಿಮೆ ಮಾಡುತ್ತವೆ. ಆದರೆ ಸಂಪೂರ್ಣ ಗುಣಮುಖತೆಯನ್ನು ಖಾತರಿಪಡಿಸುವುದಿಲ್ಲ. ಇದಲ್ಲದೆ, ಹೆಚ್‌ಪಿವಿ ಮತ್ತು ಹೆಪಟೈಟಿಸ್ ಬಿ ಲಸಿಕೆಗಳನ್ನು ಸ್ತನ ಕ್ಯಾನ್ಸರ್ ಚಿಕಿತ್ಸೆಗೆ ಬಳಸಲಾಗುತ್ತದೆ ಎಂದು ಲೇಖನದಲ್ಲಿದೆ. ಆದರೆ ಈ ಲಸಿಕೆಗಳು ಸ್ತನ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಯಾವುದೇ ಪಾತ್ರ ವಹಿಸುವುದಿಲ್ಲ.

—ಡಾ. ಶರದ್, ಕಲಬುರಗಿ



## ನಾಜಿಗಳ ಕ್ರೌರ್ಯ ನೆನಪಿಸಿತು

‘ಮನುಷ್ಯತ್ವವನ್ನೇ ಕೊಂದ ತಾಣ ಆಶ್ವಿಟ್ಜ್’ (ಜ. 29, ಡಿ.ಜಿ. ಮಲ್ಲಿಕಾರ್ಜುನ) ಪ್ರವಾಸ ಕಥನ, ನಾಜಿಗಳ ಕ್ರೂರತೆಯನ್ನು ಮತ್ತೊಮ್ಮೆ ನೆನಪಿಸಿತು. ಎರಡನೇ ಮಹಾಯುದ್ಧದ ಸಮಯ ನಡೆದ ದುರಂತಗಳಿಂದ ನಾವು ಏನೂ ಪಾಠ ಕಲಿತಿಲ್ಲ ಎನ್ನುವುದು ಈಗಲೂ ಜಗತ್ತಿನಲ್ಲಿ ನಡೆಯುತ್ತಿರುವ ಕೆಲವು ಬೆಳವಣಿಗೆಯಿಂದ ತಿಳಿಯುತ್ತದೆ. ಜಗತ್ತಿನಲ್ಲಿ ಇನ್ನೂ ಹೆಚ್ಚು ‘ಡೆತ್ ಕ್ಯಾಂಪ್’ಗಳು ನಿರ್ಮಾಣ ಆಗುತ್ತದೆಯೇ ಎಂಬ ಭಯ ಆವರಿಸಿದೆ.

—ಬಿರ್ತಿ ಸುರೇಶ್, ಬ್ರಹ್ಮಾವರ

## ಅಪೂರ್ವ ಸಾಹಸಗಾಥೆ

‘ಜನಸಾಮಾನ್ಯರ ಜಗವರಿಯಲು ಸೈಕಲ್‌ಯಾನ’ (ಜ. 29, ಆನಂದತೀರ್ಥ ಪ್ಯಾಟಿ) ಬರಹ ಸ್ಫೂರ್ತಿದಾಯಕವಾಗಿದೆ. ಶಿವರಾಯಪ್ಪ ನೀರಲೋಟಿ ಹಾಗೂ ನವೀನ್‌ಕುಮಾರ್ ಅವರ ಸಾಹಸ ಬಹಳಷ್ಟು ಜನರಿಗೆ ಉತ್ಸಾಹ ತುಂಬುವುದರಲ್ಲಿ ಸಂಶಯವೇ ಇಲ್ಲ. ದೇಶ ಹಾಗೂ ಜಗತ್ತನ್ನು ಪ್ರಭಾವಿಸಿದ ಮಹಾನ್ ವ್ಯಕ್ತಿಗಳ ಜನ್ಮಸ್ಥಳವನ್ನು ಸೈಕಲ್ ಮೂಲಕ ತಲುಪಿ ದಾರಿಯುದ್ದಕ್ಕೂ ನೈರ್ಮಲ್ಯದ ಅಭಿಯಾನ ಮಾಡಿದ ಅಪೂರ್ವ ಸಾಹಸಗಾಥೆಯಿದು.

—ಓಂಕಾರ್ ಗುರುಸಿದ್ದಪ್ಪ ಕೊತ್ರೆ, ಬೆಂಗಳೂರು

## ಅಚ್ಚರಿಯ ಹಣ್ಣು

‘ಪ್ರಕೃತಿಯ ವಿಸ್ಮಯ ವಿನೂತನ ಹಣ್ಣು– ಬುದ್ಧನ ಕೈ’ (ಜ. 29, ಬೃಂದಾ ಎನ್. ರಾವ್) ಸಚಿತ್ರ ಲೇಖನ ಚೆನ್ನಾಗಿದೆ. ನಾವು ಭೂತಾನ್, ವಿಯೆಟ್ನಾಂ ಹಾಗೂ ಚೀನಾ ಪ್ರವಾಸದಲ್ಲಿದ್ದಾಗ ಈ ಹಣ್ಣನ್ನು ನೋಡಿ ಅಚ್ಚರಿಯಾಗಿತ್ತು.



ಬುದ್ಧನ ದೇವಾಲಯಗಳಲ್ಲಿ (ಪಗೋಡ) ನೈವೇದ್ಯದ ರೀತಿ ಇತರ ಹಣ್ಣುಗಳ ಜೊತೆ ಈ ಹಣ್ಣನ್ನು ಇಟ್ಟಿದ್ದರು. ಇದು ‘ಬುದ್ಧನ ಕೈ’ ಎಂದು ಗೊತ್ತಾಯಿತು. ಹಣ್ಣನ್ನು ಹೇಗೆ ಉಪಯೋಗಿಸುತ್ತಾರೆಂದು ಗೊತ್ತಿರಲಿಲ್ಲ. ಲೇಖಕಿ ಈ ಹಣ್ಣನ್ನು ವಿವಿಧ ರೀತಿಯಲ್ಲಿ ಹೇಗೆ ಬಳಸಬಹುದು ಎಂಬುದನ್ನು ತಿಳಿಸಿದ್ದಾರೆ.

—ವಸುಧಾ ಜೈಶಂಕರ್, ಬೆಂಗಳೂರು

## ಅನುಭವೀ ದೃಷ್ಟಿಕೋನ

‘ಹೀಗೂ ಒಂದು ಕಾರಣ’ (ಜ. 29, ವಸುಮತಿ ಉಡುಪ) ಕಥೆ ಹೃದಯ ತಟ್ಟಿತು. ಹಿರಿಯರ, ಕಿರಿಯರ ಮನೋಭಾವ, ಕಾರಣಗಳನ್ನು ಸರಳವಾಗಿ ತಮ್ಮ ಅನುಭವೀ ದೃಷ್ಟಿಕೋನದಿಂದ ತೆರೆದಿಟ್ಟಿದ್ದಾರೆ. ಇಲ್ಲಿ ದೂಷಣೆಯಿಲ್ಲ, ಬದಲಿಗೆ ವಾಸ್ತವತೆಯಿದೆ. ದಿನನಿತ್ಯ ನೋಡುವ, ಕೇಳುವ ಅನುಭವಗಳನ್ನು ಅಕ್ಷರಕ್ಕಿಳಿಸಿ ಕಥೆಯ ರೂಪದಲ್ಲಿ ಹೆಣೆದ ಕಲೆಗಾರಿಕೆ ಓದುಗರ ಮನಸೆಳೆದು ಸ್ಪಂದಿಸುವಂತೆ ಮಾಡಿದೆ.



—ಲತಾ ಹೆಗಡೆ, ಹುಬ್ಬಳ್ಳಿ

## ಎಲ್ಲರ ಮನೆಯಲ್ಲೂ...

ಸಂತೋಷ ಹಾಗೂ ಅವನ ಅಕ್ಕ ಇಬ್ಬರೂ ಚಿಕ್ಕವರಿದ್ದಾಗ ಕಟ್ಟಿಸಿದ ಮನೆ ಈಗ ಹಳೆಯದಾಗಿದೆ. ಆ ಕಾಲಕ್ಕೆ ಅದು ಸರಿಯಾಗಿತ್ತು. ಆದರೆ ಈಗಿನ ಕಾಲಕ್ಕೆ ಬೇಕಾದ ಹಾಗೆ ಇಲ್ಲ. ಕಾರಣ ಇದೊಂದೇ ಆಗಿರುವುದಿಲ್ಲ, ಬೇಕಾದಷ್ಟಿರುತ್ತವೆ. ಈಗೆಲ್ಲ ಎಲ್ಲರ ಮನೆಯಲ್ಲೂ ನಡೆಯುವ ವಿಚಾರವೇ ಆಗಿದೆ. ಅದನ್ನು ಲೇಖಕಿ ಬಹಳ ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ.

—ಸುಜಾತ ಆರ್.

## ಚಿಂತನೆಗೆ ಹಚ್ಚುವ ಬರಹ

‘ಮಕ್ಕಳು ಓದುವಂತೆ ಮಾಡುವುದು ಹೇಗೆ?’ (ಜ. 29, ಭವ್ಯ ಟಿ.ಎಸ್.) ಲೇಖನವನ್ನು ಆಸಕ್ತಿಯಿಂದ ಓದಿದೆ. ಸಮಾಜದಲ್ಲಿ ಮಕ್ಕಳ ಓದು ಮತ್ತು ಅಧ್ಯಯನದ ಬಗ್ಗೆ ಜಾಗೃತಿ ಮೂಡಿಸುವ ಇಂತಹ ಉಪಯುಕ್ತ ಲೇಖನಗಳನ್ನು ಪ್ರಕಟಿಸುತ್ತಿರುವುದಕ್ಕಾಗಿ ಅಭಿನಂದನೆ. ಈ ಲೇಖನವು ಮಕ್ಕಳ ಓದುವ ಅಭ್ಯಾಸದ ಮಹತ್ವವನ್ನು ಸುಂದರವಾಗಿ ವಿವರಿಸಿದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಮಕ್ಕಳನ್ನು ಪುಸ್ತಕಗಳತ್ತ ಆಕರ್ಷಿಸುವ ಅಗತ್ಯವನ್ನು ಲೇಖಕರು ಸ್ಪಷ್ಟವಾಗಿ ಹೇಳಿದ್ದಾರೆ. ಭಾಷೆ ಸರಳವಾಗಿದ್ದು, ಮನಮುಟ್ಟುವಂತಿದೆ. ಪೋಷಕರು ಮತ್ತು ಶಿಕ್ಷಕರು ಗಮನಿಸಬೇಕಾದ ಅಂಶಗಳನ್ನು ಲೇಖನ ಚೆನ್ನಾಗಿ ಒತ್ತಿ ಹೇಳುತ್ತದೆ. ಓದುಗರಲ್ಲಿ ಚಿಂತನೆ ಹುಟ್ಟಿಸುವ ಉತ್ತಮ ಲೇಖನವಾಗಿದೆ.

— ಮಲ್ಲಿಕಾರ್ಜುನ ಬಿರಾದಾರ್, ಕಲಬುರಗಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in